

ರೆಂಬೆಕೊಂಬೆಗಳಂತೆ ಆಚೀಚೆ ಟಿಸಿಲೊಡೆಯುವ ಹಣ್ಣು ಸಂಪಿಗೆ ಮುಳ್ಳುಗಳು

ದಪ್ಪ– ಮೊಂಡಾದ ಬಿಸಿಲಣ್ಣಿನ ಮುಳ್ಳು, ಚೂಪಾದ ಕಾರೆ ಮುಳ್ಳು, ತುದಿಯಲ್ಲಿ ತುಸುವೇ ಬಾಗಿದ ಗೊಣಗಲು ಮರದ ಮುಳ್ಳು, ಅಗಲ ತಳದ ಕದಿರೆ ಮುಳ್ಳು... ಹೀಗೆ, ಮುಳ್ಳುಗಳದು ನೂರೆಂಟು ವಿನ್ಯಾಸ. ಮುಳ್ಳುಗಳ ಹುಟ್ಟಿನಲ್ಲಿ ಪ್ರಕೃತಿಯ ವಿಕಾಸವಾದದ ಗುಟ್ಟೂ ಅಡಗಿದೆ.

■ ಸವಿನಯ ಮಾಲ್ವೆ



# ಮುಳ್ಳಿನ ಮಾತುಗಳು

ಕಳ್ಳಕಾಕರೋ, ಜಾನುವಾರುಗಳೋ ತಮ್ಮ ಜಾಗದೊಳಗೆ ಬರಬಾರದೆಂದು ಬೆಟ್ಟಗಳಲ್ಲಿ, ಹುಲ್ಲಿನ ಬೇಣಗಳಲ್ಲಿ, ತೋಟ–ಗದ್ದೆಗಳ ಬೇಲಿಗಳಲ್ಲಿ ಮುಳ್ಳು ಗಿಡಗಳನ್ನು ಬಳಸುವ ಮತ್ತು ಬೆಳೆಸುವ ರೂಢಿಯಿದೆ. ಮಲೆನಾಡಿನಲ್ಲಿ ಪರಗೀ ಮತ್ತು ಕವಳಿ ಗಿಡಗಳಿಗೆ ಅಗ್ರಸ್ಥಾನವಾದರೆ, ಬಯಲುಸೀಮೆಗಳಲ್ಲಿ ಜಾಲಿಯ ಪ್ರಭೇದಗಳಿಗೆ ಪ್ರಾಶಸ್ತ್ಯ. ಮುಳ್ಳು ಜಾತಿಯ ಸಸ್ಯಗಳೂ ರೈತಸ್ನೇಹಿಯಾಗಿ ಹೇಗೆ ತಮ್ಮ ಸಹಕಾರ ನೀಡುತ್ತವೆ ನೋಡಿ!

ಮುಳ್ಳುಗಳದ್ದು ವರ್ಷಪೂರ್ತಿ ಚಾಕರಿ ವಹಿಸುವ ಸೇವಾವೃತ್ತಿ. ಮುಳ್ಳಿನ ಗಾತ್ರ ಮತ್ತು ಚುಚ್ಚುವ ತೀವ್ರತೆ ಅವಲಂಬಿಸಿ ತಲತಲಾಂತರದಿಂದ ವಿವಿಧ ಮುಳ್ಳಿನ ಸಸ್ಯ ಜಾತಿಗಳನ್ನು ಕಿರಿದುಗೊಳಿಸುತ್ತಾ, ಒಂದಷ್ಟು ಗಿಡಗಳು ಮಾತ್ರ ಜನಬಳಕೆಗೆ ಒದಗುತ್ತಿರುವುದು ಆಯಾಯ ಕಾಲಘಟ್ಟದ, ಒಟ್ಟು ಜನಸಮುದಾಯದ ರೂಢಿಯ ಕೊಡುಗೆಯೆನ್ನಬಹುದು.

ಮುಳ್ಳುಗಳ ವಿನ್ಯಾಸದಲ್ಲೂ ತರಹೇವಾರಿ ರೂಪ ವೈವಿಧ್ಯಗಳಿರುವುದು ಪರಿಸರದ ಒತ್ತಡಗಳಿಗೆ ಪ್ರತಿಯೊಂದು ಪ್ರಭೇದಗಳಲ್ಲಾಗುವ ನಿರಂತರ ವಿಕಾಸಕ್ಕೆ ಕೈಗನ್ನಡಿ. ದಪ್ಪ ಮೊಂಡಾದ ಬಿಸಿಲಣ್ಣಿನ ಮುಳ್ಳು, ಚೂಪಾದ ಕಾರೆ ಮುಳ್ಳು, ತುದಿಯಲ್ಲಿ ತುಸುವೇ ಬಾಗಿದ ಗೊಣಗಲು ಮರದ ಮುಳ್ಳು, ತಳದಲ್ಲಿ ಅಗಲವಾದ ತಳ ಹೊಂದಿರುವ ಕದಿರೆ ಮುಳ್ಳು, ನೆಗ್ಗಿಲ ಮುಳ್ಳು, ಜಾಲಿಯ ಸೂಜಿ ಮುಳ್ಳು, ಗುಲಾಬಿ ಮುಳ್ಳು, ಹರಿತವಾದ ಸೀಗೆ ಮುಳ್ಳು, ಶಂಖಾಕಾರದ ಜುಮ್ಮನ ಮುಳ್ಳು, ಒಳಗೆ ಚುಚ್ಚದೇ ಬರೀ ಚರ್ಮವನ್ನು ಗೀರುವ ಚದುರಂಗದ ಮುಳ್ಳು, ತಾಗಿದರೂ ಚರ್ಮ ಹರಿಯದ ಕೈಕೊಯ್ಕನ ಬಳ್ಳಿಯ ಮುಳ್ಳು, ದೈತ್ಯ ಜಾನುವಾರುಗಳೂ ಬೆಚ್ಚಿ ಬೀಳುವ ಪರಗೀ ಮುಳ್ಳು, ಬೆಕ್ಕಿನ ಚೋಟಿನ ತೀವ್ರತೆಯನ್ನು ನೆನಪಿಸುವ ಬೆಕ್ಕಿನ ಚೋಟು ಬಳ್ಳಿಯ ಮುಳ್ಳು, ಕೆಂದಿಗೆಯ ತಿರುಗು–ಮುರುಗು ಮುಳ್ಳು... ಹೀಗೆ ಮುಳ್ಳುಗಳ ವಿನ್ಯಾಸದ



ವೈವಿಧ್ಯ ರೂಪದ ಮುಳ್ಳುಗಳ ಡಿಜಿಟಲ್ ರೇಖಾಚಿತ್ರ.
ಚಿತ್ರಕೃಪೆ: ದಿಯ ಮರಿಯ ಪೈಸ್, ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್, ಬೆಂಗಳೂರು